**<u>ದಿ:13.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ಪ್ರತಿವಾದಿ ಪರ ಶ್ರೀ**. A.K.P.,** ವಕೀಲರಿಂದ**:-**

ನಾನು ಸನ್ 2019 ರಲ್ಲಿ ಪ್ರತಿವಾದಿಗಳ ವಿರುದ್ದ ಇದೇ ದಾವಾ ಆಸ್ತಿಗೆ ಸಂಬಂದಿಸಿ ಹಾಗೆ O.S.64/2019 ರಂತೆ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ O.S.64/2019 ದಾವೆಯನ್ನು ನಾನೇ ಹಿಂಪಡೆದಿರುತ್ತೇನೆ ಎಂದರೆ ನನಗೆ ಗೋತ್ತಿರುವುದಿಲ್ಲ . ಸದರಿ ದಾವೆಯಲ್ಲಿ ಇದೇ ವ್ಯಾಜ್ಯ ಕಾರಣಕ್ಕೆ ನಾನು ಮತ್ತೊಂದು ದಾವೆ ಹೂಡಲು ಅರ್ಜಿಯನ್ನು ಸಲ್ಲಿಸಿದ್ದು ಅದರಂತೆ ನ್ಯಾಯಾಲಯವು ರೂ.2000 ದಂಡ ವಿಧಿಸಿ ಅರ್ಜಿಯನ್ನು ಪುರಸ್ಕರಿಸಿ ಅನುಮತಿ ನೀಡಿರುತ್ತದೆ ಎಂದರೆ ಸರಿ. ಸದರಿ ರೂ.2000 ದಂಡದ ಮೊತ್ತವನ್ನು ನಾನು ಇಲ್ಲಿಯವರೆಗೂ ಪ್ರತಿವಾದಿಗಳಿಗೆ ನೀಡಿರುವುದಿಲ್ಲ ಎಂದರೆ ಸಾಕ್ಷಿ ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ . ನಾನು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ನಮ್ಮ ಜಮೀನಿಗೆ ಓಡಾಡಲು ರಸ್ತೆ ಬೇಕಾಗಿರುವ ಕಾರಣ ಸಲ್ಲಿಸಿರುತ್ತೇನೆ . ದಾವಾ ಆಸ್ತಿ ಷಡ್ಯೂಲ್ ಎ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ . ಸದರಿ ಪಿತ್ರಾರ್ಜಿತ ಆಸ್ತಿಗಳನ್ನು ನಾವು ಮತ್ತು ಪ್ರತಿವಾದಿಗಳ ತಂದೆ ಜಯರಾಮಪ್ಪ ಹಾಗೂ ನಮ್ಮ ತಂದೆಯ ಇತರೆ ಅಣ್ಣ ತಮ್ಮಂದಿರು ಎಲ್ಲಾರು ಸೇರಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲುವಿಭಾಗ ಪತ್ರದಲ್ಲಿ ನಮ್ಮ ಎ ಷಡ್ಯೂಲ್ ಆಸ್ತಿಗೆ ಓಡಾಡಲು ರಸ್ತೆ ಇರುವುದಾಗಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ಎ ಷಡ್ಯೂಲ್ ಆಸ್ತಿ ಪಕ್ಕದಲ್ಲಿ ಗ್ರಾಮಠಾಣಾ ಇರುತ್ತೆ ಎಂದರೆ ಸರಿ. ಆದ್ದರಿಂದ ಈ ಹಿಂದೆ ನಡೆದ ಪಾಲುವಿಭಾಗ ಪತ್ರದಲ್ಲಿ ರಸ್ತೆ ಇರುವುದಾಗಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾವು ಹಿಂದಿನಿಂದಲೂ ಸದರಿ ಗ್ರಾಮಠಾಣಾ ಸ್ವತ್ತಿನ ಮೂಲಕವೇ ಎ ಷಡ್ಯೂಲ್ ಆಸ್ತಿಗೆ ಓಡಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ፥</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

ಸಹಿ/-

ಸಿವಿಲ್ ನ್ಯಾಯಾಧೀಶರು, ಜಗಳೂರು